ಕ್ರಮ ಸಂಖ್ಯೆ	ದೇವಾಲಯದ ಹೆಸರು	ಗ್ರಾಮ
34.	ಶ್ರೀ ಹನುಮಂತ ದೇವರು	ಅನ್ವಾಳು
35.	ಶ್ರೀ ಆಂಜನೇಯ ದೇವರು	ಅನ್ನನಾಯಪುರ
36.	ಶ್ರೀ ಬಸವೇಶ್ವರ ದೇವರು	ಕರಿಮುದ್ದನಹಳ್ಳಿ
37.	ಶ್ರೀ ಬಸವೇಶ್ವರ ದೇವರು	ದೊಡ್ಡಬೀಚನಹಳ್ಳಿ
38.	ಶ್ರೀ ಗರ್ಗೇಶ್ವರ ದೇವರು	ದೊಡ್ಡಬೀಚನಹಳ್ಳಿ
39.	ಶ್ರೀ ಬಸವೇಶ್ವರ ದೇವರು	ಸಿಂದರಮಾರಹಳ್ಳಿ
40.	ಶ್ರೀ ಸೋಮೇಶ್ವರ ದೇವರು	ಮಟ್ಟವಾರಿ
41.	ಶ್ರೀ ಕಾಲಭೈರವೇಶ್ವರ ದೇವರು	ಕುಪ್ಪೆ
42.	ಶ್ರೀ ವೆಂಕಟರಮಣ ದೇವರು	ಜಿಂಕಿಪುರ

ಹುಣಸೂರಿನಲ್ಲಿ ಕ್ರೀಡಾಂಗಣ ನಿರ್ಮಾಣ

2245 (2665) ಶ್ರೀ ಪಾಪಣ್ಣ ವಿ. (ಹುಣಸೂರು) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಣಸೂರು ಪಟ್ಟಣದಲ್ಲಿ ಕ್ರೀಡಾಂಗಣ ಮಂಜೂರಾತಿ ನೀಡಲಾಗಿದೆಯೆ; ಹಾಗಿದ್ದಲ್ಲಿ ಯಾವಾಗ;

ಆ) ಇಲ್ಲಿಯವರೆವಿಗೂ ಪ್ರಾರಂಭ ಮಾಡದೇ ಇರಲು ಕಾರಣವೇನು;

ಇ) ಜೂನಿಯರ್ ಕಾಲೇಜು ಬಳಿ 200 ಮೀಟರ್ ಕ್ರೀಡಾಂಗಣ ನಿರ್ಮಾಣ ಮಾಡಲು ಸ್ಥಳ ತನಿಖೇ ಆಗಿದ್ದು ಕಾಮಗಾರಿ ಪ್ರಾರಂಭ ಮಾಡಿಲ್ಲ ಏಕೆ;

ಈ) ದಿವಂಗತ ದೇವರಾಜ ಅರಸ್ ರವರ ಕ್ಷೇತ್ರ ಕ್ರೀಡಾಂಗಣವಿಲ್ಲದೆ ಕ್ಷೇತ್ರಕ್ಕೆ ಈ ಕೊರತೆ ನೀಗಿಸಿ ಬೇಗನೆ ಕ್ರೀಡಾಂಗಣ ನಿರ್ಮಾಣ ಮಾಡಿಸುವಿರಾ?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) ಇಲ್ಲ.

ಆ) ಮತ್ತು ಇ) ನಿವೇಶನ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಇನ್ನೂ ವರ್ಗಾವಣೆಯಾಗದ ಕಾರಣ.

ಈ) ಪರಿಶೀಲಿಸಲಾಗುವುದು.

ಮೈಸೂರು ಇಲವಾಲ ರಸ್ತೆಯಲ್ಲಿ ರಸ್ತೆ ಉಬ್ಬುಗಳು

2246 (2666) ಶ್ರೀ ಪಾಪಣ ವಿ. (ಹುಣಸೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಇಲವಾಲ ರಸ್ತೆ ಮೈಸೂರು ಬಂಟ್ವಾಳ ಮಂಗಳೂರು ಕಾಸರಗೋಡು ರಾಜ್ಯ ಹೆದ್ದಾರಿ ಅಲ್ಲವೆ;

ಆ) ಮೈಸೂರು ಇಲವಾಲದವರೆಗೆ ಹಾಕಿರುವ ರಸ್ತೆ ಡುಬ್ಬುಗಳು ಅಡ್ಡಾದಿಡ್ಡಿಯಾಗಿ ಪ್ರಯಾಣಿಸುವವರಿಗೆ ತೊಂದರೆ ಆಗಿ ದೂರು ನೀಡಿದ್ದರೂ ಸರಿಪಡಿಸದಿರಲು ಕಾರಣವೇನು;

ಇ) ವೇಗಮಿತಿ ಮಾಡಲು ವೈಜ್ಞಾನಿಕವಾಗಿ ನ್ಯಾಯಾಲಯ ತಿಳಿಸಿರುವ ಹಾಗೇ ರಸ್ತೆ ಡುಬ್ಬಗಳು ಹಾಕಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಮೈಸೂರು-ಇಲವಾಲ-ಬಂಟ್ವಾಳ ರಸ್ತೆಯು ರಾಜ್ಯ ಹೆದ್ದಾರಿ ನಂ. 88 ಆಗಿದ್ದು ಬಂಟ್ವಾಳ-ಮಂಗಳೂರು ರಸ್ತೆಯು ರಾಷ್ಟ್ರೀಯ ಹೆದ್ದಾರಿ ನಂ. 48 ಹಾಗೂ ಮಂಗಳೂರು ಕಾಸರಗೋಡು ರಸ್ತೆಯು ರಾಷ್ಟ್ರೀಯ ಹೆದ್ದಾರಿ ನಂ. 17 ಆಗಿರುತ್ತದೆ.

ಆ) ಅವೈಜ್ಞಾನಿಕವಾಗಿ ಹಾಕಿರುವ ರಸ್ತೆ ಉಬ್ಬುಗಳನ್ನು ಹಂತ ಹಂತವಾಗಿ ತೆಗೆಸಿ, ಅತ್ಯಂತ ಅವಶ್ಯಕತೆ ಇರುವ ಕಡೆ ವೈಜ್ಞಾನಿಕವಾಗಿ ವಿನ್ಯಾಸ ಮಾಡಿದ ರಸ್ತೆ ಉಬ್ಬುಗಳನ್ನು ಹಾಕಲಾಗುತ್ತಿದೆ.

ಇ) ವೇಗಮಿತಿ ಮಾಡಲು ಸರ್ಕಾರಿ ಆದೇಶಾನುಸಾರ ವೈಜ್ಞಾನಿಕ ವಿನ್ಯಾಸದ ರಂಬಲ್ ಸ್ಟಿಪ್‌ಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಪ್ರವಾಸಿ ಕೇಂದ್ರಗಳ ಅಭಿವೃದ್ಧಿ

2247 (2675) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) : ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಗುರುತಿಸಲಾಗಿರುವಂತಹ ಪ್ರವಾಸಿ ಸ್ಥಳಗಳೆಷ್ಟು;

ಆ) ಗುರುತಿಸಲಾಗಿರುವ ಪ್ರವಾಸಿ ಸ್ಥಳಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ರಾಜ್ಯದ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗೆ ಕಳೆದ 3 ವರ್ಷಗಳಲ್ಲಿ ಸರ್ಕಾರ ಒದಗಿಸಿದ ಅನುದಾನ ಎಷ್ಟು;

ಈ) ಒದಗಿಸಲಾದ ಅನುದಾನವನ್ನು ಯಾವ ಪ್ರವಾಸಿ ಕೇಂದ್ರಗಳಿಗೆ ಯಾವ ಉದ್ದೇಶಗಳಿಗೆ ಎಷ್ಟೆಷ್ಟು ವೆಚ್ಚ ಮಾಡಲಾಗಿದೆ;

ಉ) ರಾಜ್ಯದ ಪ್ರವಾಸಿ ಸ್ಥಳಗಳ ಭೇಟಿಗೆ ಬರುವ ಪ್ರವಾಸಿಗರ ಅನುಕೂಲಕ್ಕಾಗಿ ಪ್ಯಾಕೇಜ್ ಟೂರ್‌ಗಳ ಮಾಹಿತಿ ಕೇಂದ್ರಗಳ ಹೋಟೆಲ್‌ಗಳ ಇತ್ಯಾದಿ ವ್ಯವಸ್ಥೆಯನ್ನು ಯಾವ ಯಾವ ಪ್ರವಾಸಿ ಕೇಂದ್ರಗಳಲ್ಲಿ ಕೈಗೊಳ್ಳಲಾಗಿದೆ;

ಊ) ಉಳಿದ ಪ್ರವಾಸಿ ಸ್ಥಳಗಳಲ್ಲಿ ಈ ಸೌಲಭ್ಯವನ್ನು ಕಲ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದರೆ, ನಿರ್ದಿಷ್ಟ ಕಾಲಮಿತಿ ತಿಳಿಸಿರಿ?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು):

ಅ) 236

ಆ) ಯಾತ್ರಿ ನಿವಾಸ, ಪ್ರವಾಸಿ ಸಂಕೀರ್ಣ, ಹೆದ್ದಾರಿ ಸೌಲಭ್ಯ, ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ, ಇತ್ಯಾದಿ.

ಇ) (ರೂ. ಲಕ್ಷಗಳಲ್ಲಿ)

	ವರ್ಷ- Year	ಮೊತ್ತ- Amount (ರೂ. - Rs.
1.	1999-2000	465.00
2.	2000-2001	430.00
3.	2001-2002	475.00